ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ದಿನಾಂಕ ೧೫ನೇ ಜೂನ್ ೧೯೯೦, ಜ್ಯೇಷ್ಠ ೨೫, ೧೯೧೨ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯-೦೫ ಘಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದರು].

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರಾಷ್ಟ್ರೀಯ ವಿದ್ಯುತ್ ಯೋಜನೆ ಬಗ್ಗೆ

೬೨೦ ಶ್ರೀಮತಿ ಮೋಟಮ್ಮ (ಮೂಡಿಗೆರೆ).–ಮಾನ್ಯ ಕೈಗಾರಿಕೆ, ಇಂಧನ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಷ್ಟ್ರೀಯ ವಿದ್ಯುತ್ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿದೆ. (ಜಿಲ್ಲಾವಾರು ವಿವರ ಒದಗಿಸುವುದು)

ಆ) ಸದರಿ ಯೋಜನೆಯಲ್ಲಿ ಮೂಡಿಗೆರೆ ತಾಲ್ಲೂಕಿನ ಎಷ್ಟು ಗ್ರಾಮಗಳಿಗೆ ವಿದ್ಯುತ್ತನ್ನು ಒದಗಿಸಲಾಗಿದೆ ?

ಇ) ವಿದ್ಯುತ್ತನ್ನು ಒದಗಿಸದ ಗ್ರಾಮಗಳಿಗೆ ಎಷ್ಟು ಸಮಯದೊಳಗೆ ವಿದ್ಯುತ್ತನ್ನು ಒದಗಿಸಲಾಗುವುದು ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ಪಕ್ಷ ಸಚಿವರು).—

ಅ) ಆ) ಮತ್ತು ಇ) ರಾಜ್ಯದಲ್ಲಿ ರಾಷ್ಟ್ರೀಯ ವಿದ್ಯುತ್ ಯೋಜನೆ ಎಂಬ ಯೋಜನೆಯು ಜಾರಿಯಲ್ಲಿರುವುದಿಲ್ಲ. ಆದರೆ, ಗ್ರಾಮೀಣ ವಿದ್ಯುದೀಕರಣ ಯೋಜನೆಯ ಅಡಿಯಲ್ಲಿ ೧೯೮೧ರ ಜನಗಣತಿ ಪ್ರಕಾರ ಮೂಡಿಗೆರೆ ತಾಲ್ಲೂಕಿನ ಎಲ್ಲ ವಸತಿ ಕಂದಾಯ ಗ್ರಾಮಗಳು ಸೇರಿದಂತೆ ರಾಜ್ಯದಲ್ಲಿನ ಎಲ್ಲ ವಸತಿ ಕಂದಾಯ ಗ್ರಾಮಗಳಿಗೂ ವಿದ್ಯುದೀಕರಣ ಪೂರೈಸಲಾಗಿದೆ. ವಿದ್ಯುದೀಕರಣ ಮಾಡಿರುವ ಜಿಲ್ಲಾವಾರು ಗ್ರಾಮಗಳ ಸಂಖ್ಯೆಯ ಪಟ್ಟಿಯನ್ನು ಲಗತ್ತಿಸಿದೆ:

ANNEXURE

Statement showing the No. of villages electrified as on 30-11-1989

Sl. No.	District	Total villages (1981 Cens)	Rural Population (1981 Cens)	No. of Villages Elected. as on 31-3-89.
1	Bangalore	2425	1754394	2384
2	Belgaum	1142	2309022	1139
3	Bellary	589	995065	580
4	Bidar	598	818275	593
5	Bijapur	1244	1823154	1227
6	Chickamagalur	1013	551890	978
7	Chitradurga	1266	1359556	1250
8	Coorg	288	390225	284
9	Dharwar	1322	1907229	1320
10	Gulbarga	1305	1614911	1298
11	Hassan	2371	1158542	2273
12	Kolar	2848	1477661	2811
13	Mandya	1354	1198084	1339
14	Mysore	1641	1884133	1562
15	North Kanara	1283	800241	1244
16	Raichur	1401	1440094	1382
17	Shimoga	1793	1200551	1746
18	South Kanara	635	179511	635
19	Tumkur	2506	170551	2438
	Total	27024	2640610	26483
Less :				
a)	Villages under reserved forest area			11
b)	Deserted Villages			434
c)	Submerged Villages			96
	Total (a to c)	541		
	Grand Total	26483		26483

ಶ್ರೀಮತಿ ಪೋಟಮ್ಮ.—ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆ ಕೇಳಿದ್ದು ಗ್ರಾಮಾಂತರ ವಿದ್ಯುತ್ ಯೋಜನೆಯಲ್ಲಿ ಎಂದು. ಆದರೆ ರಾಷ್ಟ್ರೀಯ ವಿದ್ಯುತ್ ಯೋಜನೆಯಡಿಯಲ್ಲಿ ಎಂದು ತಪ್ಪಾಗಿದೆ. ಆ ಯೋಜನೆ ನಮ್ಮಲ್ಲಿ ಇಲ್ಲ ಎಂದು ಹೇಳಿದ್ದಾರೆ, ಆದರೂ ಗ್ರಾಮಾಂತರ ವಿದ್ಯುತ್ ಯೋಜನೆಯಡಿಯಲ್ಲಿ ಜಿಲ್ಲಾವಾರು ಎಷ್ಟು ಗ್ರಾಮಗಳಿಗೆ ವಿದ್ಯುತ್ ಒದಗಿಸಲಾಗಿದೆ ಎಂದು ಕೇಳಿದ್ದಕ್ಕೆ ಒಂದು ಲಿಸ್ಟ್ ಕೊಟ್ಟಿದ್ದಾರೆ. ಆದೇ ರೀತಿ ಸದರಿ ಯೋಜನೆಯಲ್ಲಿ ಮೂಡಿಗೆರೆ ತಾಲ್ಲೂಕಿನ ಎಷ್ಟು ಗ್ರಾಮಗಳಿಗೆ ವಿದ್ಯುತ್ ಒದಗಿಸಲಾಗಿದೆ ಎಂದು ಕೇಳಿದ್ದಕ್ಕೆ ಸ್ಪೆಸಿಫಿಕ್ಕಾಗಿ ಉತ್ತರ ಹೇಳಿಲ್ಲ ಅವರು ಉತ್ತರದಲ್ಲಿ ಮೂಡಿಗೆರೆ ತಾಲ್ಲೂಕಿನ ಎಲ್ಲ ವಸತಿ ಕಂದಾಯ ಗ್ರಾಮಗಳಿಗೂ ಸಹ ವಿದ್ಯುತ್ ಒದಗಿಸಲಾಗಿದೆ ಎಂದು

ಹೇಳಿದ್ದಾರೆ, ನಮ್ಮ ಮಲೆನಾಡು ಹಳ್ಳಿಗಳ ದುರಂತ ಎಂದರೆ ಒಂದು ಗ್ರಾಮ ಅಂದರೆ ಅದರ ಸುತ್ತ ಮುತ್ತ ಏಳೆಂಟು ಹ್ಯಾಮ್ಲೆಟ್‌ಗಳು ಇರುತ್ತವೆ. ಇವರು ಲೆಕ್ಕಕ್ಕೆ ಮುಖ್ಯ ಗ್ರಾಮ ತೋರಿಸಿ ಅದರ ಸುತ್ತಮುತ್ತಲಿನ ಹ್ಯಾಮ್ಲೆಟ್‌ಗಳಿಗೆ ವಿದ್ಯುತ್ ಕೊಡದಿದ್ದರೆ ಬಹುಭಾಗ ವಿದ್ಯುತ್‌ನಿಂದ ವಂಚಿತವಾಗುತ್ತಾರೆ. ಉದಾಹರಣೆಗೆ ದಾರದಳ್ಳಿ ಗ್ರಾಮದ ಸುತ್ತಮುತ್ತ ಹೀಗೇ ಆಗಿದೆ. ಆದ್ದರಿಂದ ಇವರು ಲಿಸ್ಟ್ಸ್ ಕೊಟ್ಟಿರುವ ಹಳ್ಳಿಗಳಲ್ಲೆಲ್ಲ ಹ್ಯಾಮ್ಲೆಟ್‌ಗಳನ್ನೂ ಒಳಪಡಿಸಿದ್ದಾರೆಯೇ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ ೨೬,೪೮೩ ರೆವಿನ್ಯೂ ವಿಲೇಜಸ್ ಇದೆ. ರೂರಲ್ ಎಲೆಕ್ಟ್ರಿಫಿಕೇಷನ್ ಸ್ಕೀಮ್ ಪ್ರಕಾರ ಎಲ್ಲಾ ಕಡೆ ಬಂದಿದೆ. ಹೆಚ್ಚಾಗಿ ಮಲೆನಾಡಿನಲ್ಲಿ ಖಂಡಿತವಾಗಿ ತೃಪ್ತಿಕರವಾಗಿ ಇಲ್ಲ. ೫೫-೬೦ ಮನೆಗೆ ಎಲ್ಲಾದರೂ ಗ್ರಾಮದಲ್ಲಿ ವಿಲೇಜ್‌ನಲ್ಲಿ ಕೊಟ್ಟಿಗೆ ಅದು ನಮ್ಮ ಲೆಕ್ಕದ ಪ್ರಕಾರ ಎಲ್ಲಾ ಕಡೆ ಬಂದಿದೆ ಎಂದು ಇದೆ. ಈ ಸ್ಕೀಮ್ ಪ್ರಕಾರ ಅದು ಆಗಿದೆ. ಆದರೆ ಇದರಿಂದ ಮಲೆನಾಡಿನ ಜನರಿಗೆ ತೃಪ್ತಿ ಆಗುವುದಿಲ್ಲ. ಏಕೆಂದರೆ ಮನೆಗಳು ದೂರ ದೂರ ಇವೆ. ಆದಕ್ಕಾಗಿ ಸರ್ಕಾರಕ್ಕೆ ಹ್ಯಾಮ್ಲೆಟ್‌ಗೆ ಸಹ ವಿದ್ಯುತ್ ಒದಗಿಸಿಕೊಡಬೇಕೆಂಬ ಇಚ್ಛೆ ಇದೆ. ಮಲೆನಾಡಿನಲ್ಲಿ ಮನೆಗಳು ಬಹಳ ದೂರ ಇರುವುದರಿಂದ ಖರ್ಚು ಬಹಳ ಹೆಚ್ಚು ಆಗುತ್ತದೆ. ಒಂದು ಎರಡು ಕಂಬವಲ್ಲ, ೨೦-೩೦ -೪೦ ಕಂಬಗಳನ್ನು ಹಾಕಬೇಕಾಗುತ್ತದೆ. ಸರ್ಕಾರದ ಹಣಕಾಸಿನ ಸ್ಥಿತಿ ತೊಂದರೆ ಇರುವುದರಿಂದ ಅಂತೂ ಹ್ಯಾಮ್ಲೆಟ್‌ಗೆ ವಿದ್ಯುತ್ ಕೊಡಬೇಕೆಂದು ಇಚ್ಛೆ ಇದೆ. ಅದಕ್ಕಾಗಿ ನಾವು ಬ್ಯಾಂಕಿನ ಹತ್ತಿರ, ಫೈನಾನ್ಸಿಯಲ್ ಏಜೆನ್ಸಿಗಳ ಹತ್ತಿರ ಮಾತನಾಡುತ್ತಿದ್ದೇವೆ. ಬ್ಯಾಂಕಿನ ಮುಖಾಂತರ ಹಾಗೂ ಇತರ ಬಾಬಿನ ಮುಖಾಂತರ ಇನ್ನೂ ಹೆಚ್ಚಿನ ಹಣವನ್ನು ತೆಗೆದುಕೊಂಡು ರೂರಲ್ ಎಲೆಕ್ಟ್ರಿಫಿಕೇಷನ್ ಅನ್ನು ಹ್ಯಾಮ್ಲೆಟ್‌ಗಳಿಗೆ, ಹರಿಜನ ಬಸ್ತಿಗಳಿಗೂ ಮತ್ತಿತರ ತಾಂಡಾಗಳಿಗೂ ಕೊಡಬೇಕೆಂದು ಸರ್ಕಾರದ ಇಚ್ಛೆ ಇದೆ.

ಶ್ರೀಮತಿ ಮೋಟಮ್ಮ.—ಇಲ್ಲಿ ಪರಿಸ್ಥಿತಿ ಏನು ಆಗಿದೆ ಅಂದರೆ ಮಲೆನಾಡು ಪ್ರದೇಶದಲ್ಲಿ ಗವರ್ನ್‌ಮೆಂಟಿನ ಒಂದು ಡೈರೆಕ್ಷನ್ ಇದೆ, ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುದ್ದೀಕರಣ ಮಾಡಬೇಕಾದರೆ ೪೦ ಸಾವಿರ ರೂಪಾಯಿಗೆ ಒಳಪಟ್ಟ ಎಸ್ಟಿಮೇಟ್ ಇದ್ದರೆ ಮಾತ್ರ ತಕ್ಷಣ ಎಲೆಕ್ಟ್ರಿಫಿಕೇಷನ್‌ಗೆ ತೆಗೆದುಕೊಳ್ಳಿ, ಅದಕ್ಕಿಂತ ಮೇಲ್ಪಟ್ಟ ಅಮೌಂಟ್ ಇದ್ದರೆ ೪೦ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಇದ್ದರೆ ವಿದ್ಯುದ್ದೀಕರಣ ಪದ್ಧತಿಗೆ ತೆಗೆದುಕೊಳ್ಳಬಾರದೆಂದು ಆದೇಶ ನೀಡಲಾಗಿದೆ. ಇದರಿಂದ ಏನಾಗಿದೆಯೆಂದರೆ, ನಮ್ಮ ಮಲೆನಾಡಿನ ಮೂಲೆ ಭಾಗಗಳಿಗೆ ನಿಜವಾಗಿ ವಿದ್ಯುತ್ ಅನ್ನು ಒದಗಿಸುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಆದ್ದರಿಂದ ಇದನ್ನು ಏನಾದರೂ ರಿಲ್ಯಾಕ್ಸ್ ಮಾಡುವುದಕ್ಕೆ ಆಗುತ್ತದೆಯೇ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಯಾವುದೇ ಒಂದು ಸ್ಕೀಮ್ ಮಾಡಬೇಕಾದರೆ ಅದರ ಒಂದು viability ಯನ್ನು ನೋಡಬೇಕಾಗುತ್ತದೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಮಾಡಬೇಕಾಗುತ್ತದೆ. ಮಲೆನಾಡು ಪ್ರದೇಶದಿಂದ ನಾನು ಕೂಡ ಬಂದಿರುವುದರಿಂದ ಇನ್ನು ಮುಂದೆ ಹೆಚ್ಚಿನ ಪ್ರಮಾಣದಲ್ಲಿ ಹ್ಯಾಮ್ಲೆಟ್‌ಗಳಿಗೆ ವಿದ್ಯುತ್ ಸರಬರಾಜು ಹೋಗುವ ರೀತಿಯಲ್ಲಿ ನಾವು ಕೆಲಸ ಮಾಡುತ್ತೇವೆ.

SRI M. V. VENKATAPPA.—Why discrimination between Maidan and Malnad ?

MR. SPEAKER.—Because Malnad is Malnad:

SRI S. M. YAHYA.—Obviously the Hon'ble Member knows about it. There will be distance between house to house. This is what is called reasonable discrimination which is permitted.

ರೋಗಗ್ರಸ್ತ ಕೈಗಾರಿಕಾ ಘಟಕಗಳ ಬಗ್ಗೆ

೬೨೧. ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ೧೫-೪-೯೦ರವರೆಗೆ ರಾಜ್ಯದಲ್ಲಿ ಎಷ್ಟು ಮಧ್ಯಮ ಮತ್ತು ಭಾರೀ ಕೈಗಾರಿಕೆಗಳು ರೋಗಗ್ರಸ್ತಗಳಾಗಿವೆ ?

೨. ಈ ಕೈಗಾರಿಕೆಗಳಿಗಾಗಿ ಎಷ್ಟು ಹಣವನ್ನು ಹಾಕಲಾಗಿದೆ ?